ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

## ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ

## ಸೆಷನ್ಸ್ ಕೇಸ್ ನಂಬರ್ : 252/2022

**ಫ್ರಾಸಾ-8 ಚಾಸಾ- 11**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಲೋಕೇಶ |
| ತಂದೆಯ ಹೆಸರುಃ | : | ಪುಟ್ಟಸ್ವಾಮಿ |
| ವಯಸ್ಸುಃ | : | 54 ವರ್ಷ |
| ಉದ್ಯೋಗಃ | : | ಕೂಲಿ |
| ವಾಸ | : | ಕೂಗೆಕೋಡಿ ಗ್ರಾಮ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:09-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನನಗೆ ಮೃತ ಆನಂದರ ಪರಿಚಯ ಇಲ್ಲ. ಆರೋಪಿತರ ಪರಿಚಯವಿಲ್ಲ. ಮೃತ ಆನಂದ ಸತ್ತಾಗ ನಾನು ಆಸ್ಪತ್ರೆಗೆ ಹೋಗಿಲ್ಲ. ಈಗ ತೋರಿಸಿದ ದಾಖಲೆಯಲ್ಲಿ ನನ್ನ ರುಜು ಇದೆ. ಈದಾಖಲೆಯನ್ನು ನಿಪಿ-10 ಎಂದು ಸಾಕ್ಷಿಯ ರುಜುವನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ನಾನು ನನಗೆ ಸಂಬಂಧಿಸಿದ ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಠಾಣೆಗೆ ಹೋಗಿದ್ದಾಗ ಈ ಸಹಿ ಪಡೆದಿರುತ್ತಾರೆ. ಹಾಸನ ಸರ್ಕಾರಿ ಆಸ್ಪತ್ರೆಯಲ್ಲಿ ನಾನು ಈ ಸಹಿ ಹಾಕಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ.ಹಾಸನ ಸರ್ಕಾರಿ ಆಸ್ಪತ್ರೆಯಲ್ಲಿ ಪೊಲೀಸರು ನನ್ನ ಸಮಕ್ಷಮ ಮೃತ ಆನಂದನ ಶವಪಂಚನಾಮೆ ಮಾಡಿಲ್ಲ ಮತ್ತು ಈ ದಾಖಲೆಯನ್ನು ಬರೆದಿಲ್ಲ ಹಾಗೂ ನನ್ನ ಸಹಿ ಪಡೆದಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ದಿಃ7-6-2022ರಂದು ನಾನು ಹಾಸನ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಹೋಗಿದ್ದೆನು ಎಂದರೆ ಸರಿಯಲ್ಲ. ಅಲ್ಲಿ ಮೃತ ಆನಂದನ ಶವ ಇತ್ತು ಎಂದರೆ ಸರಿಯಲ್ಲ. ಅಲ್ಲಿಗೆ ಪೊಲೀಸರು ಕೂಡ ಬಂದಿದ್ದರು, ಆ ಶವವನ್ನು ಪರಿಶೀಲಿಸಿ ಪೊಲೀಸರು ನಿಪಿ-10ರಂತೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಇಲ್ಲ ಎಂದು ಹೇಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**